## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

### ವಿಶೇಷ ಮೊಕದ್ದಮೆ ಸಂಖ್ಯೆಃ- 997/2021

ಪ್ರಾಸಾಃ- 1   ಚಾಸಾಃ- 1

| | | |
|---|---|---|
| ಸಾಕ್ಷಿಯ ಹೆಸರು | : | ವಿರೇಶ್ |
| ತಂದೆ ಹೆಸರು | : | ಈರಣ್ಣ |
| ವಯಸ್ಸು | : | 32 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಊಳೂರು ಗ್ರಾಮ , |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 11.09.2023

### ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ನನಗೆ ಚಾಸಾ 2 ಮತ್ತು 3 ಗೊತ್ತು . ಚಾಸಾ 4 ನನ್ನ ಹೆಂಡತಿ . ಚಾಸಾ 5 ರಿಂದ 11 ಗೊತ್ತು . ಆರೋಪಿತರು ಗೊತ್ತು . ಆರೋಪಿ 1 ರಿಂದ 4 ಅಗಸರ ಜಾತಿಗೆ ಸೇರಿರುತ್ತಾರೆ . ಆರೋಪಿ 5 ರಿಂದ 9 ಆದಿ ಕರ್ನಾಟಕ ಜನಾಂಗಕ್ಕೆ ಸೇರಿರುತ್ತಾರೆ . ನಾವು ಆದಿ ಕರ್ನಾಟಕ ಜನಾಂಗಕ್ಕೆ ಸೇರಿರುತ್ತೇವೆ.

ನನಗೆ ಸಂಬಂಧಿಸಿದ ಭೂಮಿ ಸರ್ವೆ ನಂಃ 205/ಎ 72 ಸೆಂಟ್ಸ್ , 205/ಬಿ 90 ಸೆಂಟ್ಸ್ ಜಮೀನು ಊಳೂರಿನಲ್ಲಿ ಇರುತ್ತದೆ . ಸದರಿ ಜಮೀನುಗಳನ್ನು ನಮ್ಮ ತಾತ ಹನುಮಂತಪ್ಪ ಈತನಿಗೆ ಸರಕಾರದವರು ಮಂಜೂರು ಮಾಡಿರುತ್ತಾರೆ . ಆತನ ತರುವಾಯ ನನ್ನ ತಂದೆ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ . ಈಗ ನಾನು ಸದರಿ ಭೂಮಿಗಳನ್ನು ಸಾಗುವ ಮಾಡುತ್ತಿರುತ್ತೇನೆ . ಸದರಿ ಭೂಮಿಗಳಿಗೆ ನನ್ನನ್ನು ಹೊರತು ಪಡಿಸಿ ಬೇರೆ ಯಾರೂ ಮಾಲೀಕರು ಮತ್ತು ಸ್ವಾಧೀನದಾರರು ಇರುವುದಿಲ್ಲ .

ಈಗ್ಗೆ 3 ವರ್ಷಗಳ ಹಿಂದೆ ನನ್ನ ಹೊಲ ಟ್ರಾಕ್ಟರ್ ನಿಂದ ಟ್ರೆಲ್ಲರ್ ಹೊಡಿಸಬೇಕೆಂದು ನಾನು , ನನ್ನ ಹೆಂಡತಿ ಚಾಸಾ 4 , ನನ್ನ ಮಕ್ಕಳಾದ ಶಿವಶಂಕರ್ ಮತ್ತು ಲಕ್ಷ್ಮಿ ರವರನ್ನು ಕರೆದುಕೊಂಡು ಹೊಲಕ್ಕೆ ಹೋಗಿದ್ದೆವು . ಆಗ ಟ್ರ್ಯಾಕ್ಟರ್ ಟ್ರೆಲ್ಲರ್ ಗೆ ಬರಲಿಲ್ಲ . ಆ ಕಾರಣಕ್ಕೆ ನಾವು ಕೆಲಸ ಮಾಡಲು ನಮ್ಮ 90 ಸೆಂಟ್ಸ್ ವಿಸ್ತೀರ್ಣ ಇರುವ ಜಮೀನಿಗೆ ಬಂದೆವು . ಆಗ ಅಲ್ಲಿಗೆ ಎಲ್ಲಾ ಆರೋಪಿತರು ಗುಂಪು ಗೂಡಿ ನಾನು ಇದ್ದ ನಮ್ಮ ಹೊಲಕ್ಕೆ ಬಂದು ಅದರಲ್ಲಿ 1 ನೇ ಆರೋಪಿ

ಈ ಮಾದಿಗ ಸೂಳೇ ಮಗನದು ಬಹಳ ಆಗಿದೆ ಏನು ಮಾಡುತ್ತಾನೆ ಹುಚ್ಚಪ್ಪಣ್ಣ ಕೊಲ್ಲಿ ಬಿಡೋಣ ಎಂದು ಬೆದರಿಕೆ ಹಾಕಿದನು . ಆರೋಪಿ 4 ಈ ಮಾದಿಗ ಸೂಳೇ ಮಗನದು ಏನು ಇದು ಹೊಡೆದು ಹಾಕಿದರೆ ಆಯಿತು ಎಂದು ಹೇಳಿದಳು .

ಈ ಹಂತದಲ್ಲಿ ನ್ಯಾಯಾಲಯದ ಸಮಯದ ಅಭಾವದಿಂದ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.